ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,

ಶ್ರೀರಂಗಪಟ್ಟಣ

PW-1

**ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ 09.01.2026**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈದಾವೆಯನ್ನು ನಾನು ದಾವಾ ಆಸ್ತಿ ನನ್ನದು ಎನ್ನುವ ಬಗ್ಗೆ ಸಲ್ಲಿಸಿರುತ್ತೇನೆ. ಪ್ರತಿವಾದಿಯು ಏನು ತೊಂದರೆ ನೀಡಿರುತ್ತಾರೆ ಎಂದು ನೀವು ಈ ದಾವೆ ಸಲ್ಲಿಸಿರುತ್ತಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರು ನಮ್ಮ ಮನೆ ಮೇಲೆ ತೊಂದರೆ ನೀಡುತ್ತಿದ್ದ ಕಾರಣ ಈ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ತೋಂದರೆ ನೀಡುತ್ತಿದ್ದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮೂಲ ಹಕ್ಕು ಪತ್ರವು ಹೇಗೆ ಹಾಳಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಳೆ ಬಂದಾಗ ನೆಂದು ಹೋಗಿ ಹರಿದು ಹೋಗಿ ಹಾಳಾಗಿರುತ್ತದೆ ಎಂದು ನುಡಿಯುತ್ತಾರೆ. ಹರಿದು ಹೋದ ಹಕ್ಕು ಪತ್ರ ನಿಮ್ಮ ಬಳಿ ಇದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮತ್ತೊಂದು ಹಕ್ಕು ಪತ್ರವನ್ನು ಪಡೆದುಕೊಳ್ಳಲು ನೀವು ಮುನಿಸಿಪಾಲಿಟಿಸಿ ಕಚೇರಿಗೆ ಅರ್ಜಿ ಸಲ್ಲಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ಹೆಸರಿಗೆ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನನ್ನ ಬಳಿ ಹಕ್ಕು ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ನಮ್ಮ ಮನೆಗೆ ತೊಂದರೆ ನೀಡಿರುತ್ತಾರೆ ಎನ್ನುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅವರ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನೇ ಸ್ವಾಧೀನದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ನಾನು ಯಾವುದೇ ದೂರನ್ನು ಸಹಾ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ.9 ರಲ್ಲಿ ಸ್ವತ್ತಿನ ಭಾವ ಚಿತ್ರದಲ್ಲಿ ಶೀಟಿನ ಮನೆ ಕಾಣಿಸುತ್ತಿದೆ ಎಂದರೆ ಹೌದು. ಶೀಟಿನ ಮನೆಯ ಪಕ್ಕದಲ್ಲಿರುವ ಜಾಗ ಪ್ರತಿವಾದಿಗೆ ಸೇರಿದ್ದು ಅದನ್ನು ಲಪಾಟಾಯಿಸುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**